ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂ.ಸಾಆ/ಗಣಕ/ವೈವ-24/2019-20

ಆಯುಕ್ತರ ಕಛೇರಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
1ನೇ ಮಹಡಿ, 'ಎ' ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ,
ಕೆ.ಹೆಚ್. ರಸ್ತೆ ಶಾಂತಿನಗರ, ಬೆಂಗಳೂರು-27.
ದಿನಾಂಕ:19-02-2020. ದೂ:080-22214900
ಮಿಂಚಂಚೆ: transcom@nic.in.

## ಸುತ್ತೋಲೆ

ವಿಷಯ : ಡಿ.ಎಸ್.ಎ ಪ್ರಕರಣಗಳಲ್ಲಿ ದಾಖಲಾದ ವಾಹನಗಳ ರಾಜೀ ದಂಡವನ್ನು ವಾಹನ್-4 ತಂತ್ರಾಂಶದಲ್ಲಿ ರಾಜ್ಯದ ಯಾವುದೇ ಕಛೇರಿಗಳಲ್ಲಿ ಪಾವತಿಸುವ ಕುರಿತು.

***

ಕರ್ನಾಟಕ ರಾಜ್ಯದಲ್ಲಿ ವಾಹನ್-4 ತಂತ್ರಾಂಶವನ್ನು ಅನುಷ್ಠಾನಗೊಳಿಸಿದ ನಂತರ, ರಾಜ್ಯದ ವಿವಿಧ ಕಛೇರಿಗಳಲ್ಲಿ ಬಾಕಿ ಇರುವ ಡಿ.ಎಸ್.ಎ ಪ್ರಕರಣಗಳಲ್ಲಿ ಮತ್ತು ಇನ್ನಿತರ ಕಾರಣಗಳಿಗಾಗಿ ದಾಖಲಾದ ವಾಹನಗಳ ಪಟ್ಟಿಯನ್ನು ಬ್ಲ್ಯಾಕ್ ಲಿಸ್ಟ್ (Black List) ನಲ್ಲಿ ಸೇರ್ಪಡೆಗೊಳಿಸಿ ಮತ್ತು ಅಂತಹ ವಾಹನಗಳ ಡಿ.ಎಸ್.ಎ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ವಾಹನದ ಮಾಲೀಕರು ತೆರಳಬೇಕಾದ ಸಂದರ್ಭ ಉಂಟಾಗಿರುತ್ತದೆ. ಆದಕಾರಣ, ವಾಹನ ಮಾಲೀಕರಿಗೆ ತಮ್ಮ ವಾಹನಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವಲ್ಲಿ ವಿಳಂಬ ಹಾಗೂ ಅನಾನುಕೂಲತೆಯಾಗುತ್ತಿರುವುದು ಕಂಡುಬಂದಿದೆ. ಇದರ ಬಗ್ಗೆ Federation of Karnataka State Lorry Owners and Agents Association (R), ಬೆಂಗಳೂರು ರವರು ಮನವಿ ಸಲ್ಲಿಸಿ ವಾಹನ್-4 ತಂತ್ರಾಂಶದಲ್ಲಿ ಬದಲಾವಣೆ ತಂದು ತಮಗೆ ಆಗುತ್ತಿರುವ ಅನಾನುಕೂಲತೆಯನ್ನು ಸರಿಪಡಿಸಲು ಕೋರಿರುತ್ತಾರೆ.

ರಾಜ್ಯದ ಎಲ್ಲಾ ಸಾರಿಗೆ ಕಛೇರಿಗಳ ಮುಖ್ಯಸ್ಥರುಗಳಿಗೆ ಈ ಮೂಲಕ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ ವಾಹನ್-4 ತಂತ್ರಾಂಶಗಳಲ್ಲಿ ಬದಲಾವಣೆ ತರಲಾಗಿದ್ದು, ಕೂಡಲೇ ಜಾರಿಗೆ ಬರುವಂತೆ ರಾಜ್ಯದ ಯಾವುದೇ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ದಾಖಲಾದ ಡಿ.ಎಸ್.ಎ ಪ್ರಕರಣಗಳನ್ನು ವಾಹನಗಳ ಮಾಲೀಕರುಗಳ ಅನುಕೂಲಕ್ಕೆ ತಕ್ಕಂತೆ ಯಾವುದೇ ಕಛೇರಿಯಲ್ಲಿ ಹಾಜರಾಗಿ ಡಿ.ಎಸ್.ಎ ಪ್ರಕರಣಕ್ಕೆ ಸಂಬಂಧಿಸಿದ ಮತ್ತು ವಾಹನಗಳಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಹಾಜರುಪಡಿಸಿ ನಿಗಧಿತ ರಾಜೀ ದಂಡವನ್ನು ಮತ್ತು ತೆರಿಗೆ ಬಾಕಿ ಇದ್ದಲ್ಲಿ ಪಾವತಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಅಲ್ಲದೇ, ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಡಿ.ಎಸ್.ಎ ಪ್ರಕರಣಗಳ ಕಡತಗಳನ್ನು ಪರಿಶೀಲಿಸಿ ಅವುಗಳಲ್ಲಿ ಬರಬೇಕಾದ ದಂಡ ಮತ್ತು ತೆರಿಗೆ ಇದರ ಮೊತ್ತವನ್ನು ಲೆಕ್ಕ ಹಾಕಿ ಸದರಿ ಮೊತ್ತವನ್ನು ಡಿ.ಎಸ್.ಎ ವಿಲೇವಾರಿ ಮಾಡುವ MODULE ನಲ್ಲಿ ಕೂಡಲೇ ನಮೂದಿಸಲು ಆದೇಶಿಸಲಾಗಿದೆ. ಅಲ್ಲದೇ, Type of Offence ಜಾಗದಲ್ಲಿ Compounding Fine ಎಂಬ ಶೀರ್ಷಿಕೆಯನ್ನು ಬರೆಯತಕ್ಕದ್ದು.

...2

ಆದಕಾರಣ, ಎಲ್ಲಾ ಸಾರಿಗೆ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಬಾಕಿ ಇರುವ ಎಲ್ಲಾ ಕಡತಗಳನ್ನು ವಾಹನ್–4 ತಂತ್ರಾಂಶದ DSA Black List Vehicle Module ನಲ್ಲಿ ಭರ್ತಿ ಮಾಡಲು ಸೂಚಿಸಲಾಗಿದೆ. ಇಲಾಖೆಯ ರಾಜಸ್ವ ವಸೂಲಾತಿ ದೃಷ್ಟಿಕೋನದಿಂದ ಮತ್ತು ವಾಹನ ಮಾಲೀಕರು ತಮಗೆ ಅನುಕೂಲವಾದ ರಾಜ್ಯದ ಯಾವುದೇ ಸಾರಿಗೆ ಕಛೇರಿಯಲ್ಲಿ ಡಿ.ಎಸ್.ಎ ಪ್ರಕರಣವನ್ನು ಇತ್ಯರ್ಥಗೊಳಿಸಿಕೊಳ್ಳಲು ಈ ವ್ಯವಸ್ಥೆಯನ್ನು ಮಾಡಲಾಗಿದ್ದು, ಇದರ ಉಪಯೋಗದಿಂದ ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

20/02

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

ಇವರಿಗೆ,

1) ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ / ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು ಮತ್ತು ಜಂಟಿ ಸಾರಿಗೆ ಆಯುಕ್ತರುಗಳಿಗೆ ಮಾಹಿತಿಗಾಗಿ.
3) ಅಪರ ಸಾರಿಗೆ ಆಯುಕ್ತರು (ಪರಿಸರ ಮತ್ತು ಇ–ಆಡಳಿತ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಸುತ್ತೋಲೆಯ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಣೆಗಾಗಿ.
4) ಸಾರಿಗೆ ಆಯುಕ್ತರ ಆಪ್ತ ಶಾಖೆಗೆ.
5) ಕಡತಕ್ಕೆ.